ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈಜಿಪುರ ಪ್ರದೇಶವು 1996ರ ಹಿಂದೆ ರೆವಿನ್ಯೂ ಬಡಾವಣೆಯಾಗಿದ್ದು, ಈ ಪ್ರದೇಶವು ಅಡ್ಡಾದಿಡ್ಡಿಯಾಗಿ ಬಳೆದ ನಾಗರೀಕ ಸೌಲಭ್ಯಗಳಿಂದ ವಂಚಿತವಾದ ಪ್ರದೇಶವಾಗಿತ್ತು. ಇದು ತಗ್ಗು ಪ್ರದೇಶದಿಂದ ಕೂಡಿದೆ. ಈ ಎಲ್ಲಾ ಕಾರಣಗಳಿಂದ, ಈ ಪ್ರದೇಶವನ್ನು ವ್ಯವಸ್ಥಿತವಾಗಿ ಅಭಿವೃದ್ಧಿ ಪಡಿಸಲಾಗಿರುವುದಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಯು ಈ ಪ್ರದೇಶಕ್ಕೆ ಈಗಾಗಲೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ, ಹಾಲಿ ಇದ್ದ ಕಚ್ಚಾರಸ್ತೆಗಳನ್ನು ರಸ್ತೆ ಬದಿಯ ಚರಂಡಿ ಮತ್ತು ಅಡಿಗಾಲುವೆಗಳೊಂದಿಗೆ ಮೆಟಲಿಂಗ್ ರಸ್ತೆಗಳನ್ನಾಗಿ ಮಾಡುವ ಕೆಲಸಗಳನ್ನು ಕೈಗೊಳ್ಳಲಾಗಿದೆ. ಮತ್ತು ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೆ, ಅನೇಕ ಸೇತುವೆಗಳನ್ನು ಸಹ ನಿರ್ಮಿಸಲಾಗಿದೆ. ಆದರೆ, ಸ್ವಾಧೀನ ಪಡಿಸಿಕೊಳ್ಳಲು ಮತ್ತು ಆಟದ ಮೈದಾನ ಮತ್ತು ಉದ್ಯಾನವನ, ಮತ್ತಿತರೆ ಸೌಲಭ್ಯಗಳನ್ನು ಒದಗಿಸಲುಯಾವುದೇ ಖಾಲಿ ಜಾಗಗಳು ಲಭ್ಯವಿರುವುದಿಲ್ಲ.

ಸರ್ಕಾರಿ ನೌಕರರು ಪತ್ರಿಕಾ ವರದಿಗಾರರಾಗಿ ಕೆಲಸ ಮಾಡುವುದರ ಬಗ್ಗೆ

2668 (3198) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರು ಪತ್ರಿಕಾ ವರದಿಗಾರರಾಗಿ ಕೆಲಸ ಮಾಡಬಹುದೇ;

ಆ) ಸರ್ಕಾರದಿಂದ ಅವರು ಪರವಾನಿಗೆ ಪಡೆದಿರುತ್ತಾರೆಯೇ;

ಇ) ಯಾವ ಆಧಾರದ ಮೇಲೆ ಅವರಿಗೆ ಪರವಾನಿಗೆ ಕೊಡಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ(ಮುಖ್ಯ ಮಂತ್ರಿಗಳು) :

ಅ) ಇಲ್ಲಾ

ಆ) ಮತ್ತು ಇ) ಐಟಂ (ಅ) ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ, ಇದು ಉದ್ಭವಿಸುವುದಿಲ್ಲ.

ಕೆ.ಇ.ಬಿ. ಮೀಟರ್ ಬೋರ್ಡುಗಳ ಅಭಾವ

2669 (3199) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಇ.ಬಿ. ಮೀಟರ್ ಬೋರ್ಡ್‌ನ ಅಭಾವ ಉಂಟಾಗಲು ಕಾರಣವೇನು;

ಆ) ಕೊಡಗು ಜಿಲ್ಲೆಗೆ ಎಷ್ಟು ಮೀಟರ್ ಬೋರ್ಡ್ ಮಂಜೂರು ಮಾಡಲಾಗಿದೆ;

ಇ) ಎಷ್ಟು ಬೇಡಿಕೆ ಇದೆ;

ಈ) ಎಲೆಕ್ಟ್ರಾನಿಕ್ ಮೀಟರನ್ನು ಯಾವ ಕಂಪನಿಯಿಂದ ತರಿಸಿಕೊಳ್ಳಲಾಗುತ್ತಿದೆ;

ಉ) ವಿದ್ಯುತ್ ಬಿಲ್ಲನ್ನು ಕಮರ್ಷಿಯಲ್ ಲಾಡ್ಜ್‌ಗಳಿಗೆ ಫ್ಲೋರ್ ಏರಿಯಾದ ಮೇಲೆ ಎಷ್ಟು ನಿಗಧಿಪಡಿಸಲಾಗಿದೆ;

ಊ) ಯಾವ ಆಧಾರದ ಮೇಲೆ ನಿಗದಿಪಡಿಸಲಾಗಿದೆ;

ಋ) ಹಳೆ ಕಟ್ಟಡಗಳಿಗೆ 2 ವರ್ಷದ ನಂತರ ಹಣ ನಿಗದಿಪಡಿಸಿ ನೋಟೀಸ್ ಕೊಟ್ಟಿದ್ದೀರಿ ಇದನ್ನು ಪಾವತಿ ಮಾಡಲು ಆಗದಷ್ಟು ಬಿಲ್ ಕೊಟ್ಟಿದ್ದೀರಿ, ಇದನ್ನು ಕಟ್ಟಲು ಕಂತಿನ ವ್ಯವಸ್ಥೆ ಮಾಡಲಾಗುವುದೇ;

ಋ) ಕೆ.ಇ.ಬಿ.ಯಲ್ಲಿ ಕಂಬಗಳು ಕಡಿಮೆ ಇರಲು ಕಾರಣವೇನು?

ಶ್ರೀ ವೀರ ಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಮೀಟರ್ ಬೋರ್ಡುಗಳನ್ನು ಸರಬರಾಜು ಮಾಡುವುದು ಕ.ವಿ.ಪ್ರ.ನಿ.ನಿ.ದ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ಕ.ವಿ.ಪ್ರ.ನಿ.ನಿ.ದಲ್ಲಿ ಹೆಚ್ಚು ಪ್ರಿನಿಷನ್ ಉಳ್ಳ ಮೀಟರ್‌ಗಳನ್ನು ಖರೀದಿಸುವ ಉದ್ದೇಶದಿಂದ ಟೆಂಡರ್‌ಗಳನ್ನು ಕರೆಯಾಲಾಗಿದ್ದು, ವಿವರವಾದ ಪರಿಶೀಲನೆಯಾದ ನಂತರ ಫೆಬ್ರವರಿ-2000 ರಿಂದ ಮೀಟರ್‌ಗಳನ್ನು ಸರಬರಾಜು ಮಾಡಲು ಕಂಪನಿಗಳಿಗೆ ಆದೇಶ ನೀಡಲಾಗಿದೆ. ಕಂಪನಿಗಳು ಈಗಾಗಲೇ ಮೀಟರ್‌ಗಳನ್ನು ಸರಬರಾಜು ಮಾಡುತ್ತಿವೆ.

ಆ) ಕೊಡಗು ಜಿಲ್ಲೆ ಮಡಿಕೇರಿ ವಿಭಾಗಕ್ಕೆ 1999 - 2000ನೇ ಸಾಲಿನಲ್ಲಿ ಮಂಜೂರಾದ ವಿವಿಧ ರೇಟಿಂಗ್ ಮೀಟರ್‌ಗಳ ಸಂಖ್ಯೆ : 2490

ಇ) 31-3-2000ರವರೆವಿಗೆ ಪೂರ್ಣಗೊಂಡಹೊಸ ಸ್ಥಾವರಗಳಿಗೆ ಬೇಕಾಗುವ ಒಟ್ಟುವಿವಿಧ ರೇಟಿಂಗ್‌ಮೀಟರ್‌ಗಳ ಸಂಖ್ಯೆ 2253 ಹಾಗೂ ಕೆಟ್ಟು ಹೋದ ಮಾಪಕಗಳಬದಲಾವಣೆಗೆ 5804 ಮೀಟರ್‌ಗಳು ಬೇಕಾಗಿವೆ.

ಈ) ಈವರೆವಿಗೂ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಎಲ್.ಅಂಡ್.ಟಿ. ಲಿಮಿಟೆಡ್, ಬೆಂಗಳೂರು, ರವರಿಂದ ಖರೀದಿಸಲಾಗುತ್ತಿದೆ.

ಉ) ವಾಣಿಜ್ಯ ಸಂಕೀರ್ಣಗಳಿಗೆ ವಿದ್ಯುತ್‌ಸಂಪರ್ಕ ನೀಡುವಾಗ ಫ್ಲೋರ್ ಏರಿಯಾದ ಪ್ರತಿ ಚದರ ಮೀಟರಿಗೆ 75 ವ್ಯಾಟನಂತೆವಿದ್ಯುತ್ ಬೇಡಿಕೆಯನ್ನು ಅಂದಾಜು ಮಾಡಲಾಗುತ್ತದೆ. ಈ ರೀತಿ ಅಂದಾಜು ಮಾಡಿದ ವಿದ್ಯುತ್ ಬೇಡಿಕೆ ಅಥವಾ ಅರ್ಜಿದಾರರು ಕೇಳುವ ವಿದ್ಯುತ್ ಬೇಡಿಕೆ ಇವುಗಳಲ್ಲಿ ಯಾವುದು ಜಾಸ್ತಿಯಾಗಿರುವುದೋ ಅದನ್ನು ತೆಗೆದು ಕೊಂಡು ವಾಣಿಜ್ಯ ಸಂಕೀರ್ಣಕ್ಕೆ ಎಲ್.ಟಿ.(ಎಲ್.ಟಿ.3ಜಕಾತಿ) ವಿದ್ಯುತ್ ಅಥವಾ ಹೆಚ್.ಟಿ. ವಿದ್ಯುತ್ ತೆಗೆದುಕೊಳ್ಳಲು ಸೂಚಿಸಲಾಗುತ್ತದೆ.

ಅಂದಾಜು ಮಾಡಲಾದ ವಿದ್ಯುತ್ ಬೇಡಿಕೆಯು 100 ಕಿ.ವ್ಯಾ ಅಥವಾ ಅರ್ಜಿದಾರರು ಕೇಳುವ ವಿದ್ಯುತ್ ಬೇಡಿಕೆಯು 75 ಕಿ.ವ್ಯಾಗಿಂತ ಜಾಸ್ತಿ ಇದ್ದಲ್ಲಿ ಅಂತಹ ವಾಣಿಜ್ಯ ಸಂಕೀರ್ಣಕ್ಕೆ ಹೆಚ್.ಟಿ ವಿದ್ಯುತ್ ಸೌಲಭ್ಯ ನೀಡಲಾಗುತ್ತದೆ. 75 ಕಿ.ವ್ಯಾ ಗಿಂತ ಕಡಿಮೆ ಬೇಡಿಕೆಯಿದ್ದಲ್ಲಿ ಎಲ್.ಟಿ. ವಿದ್ಯುತ್ ಸಂಪರ್ಕ ನೀಡಲಾಗುತ್ತದೆ.

ಊ) ಇಂಡಿಯನ್ ಎಲೆಕ್ಟ್ರಿಸಿಟಿ (ಸಪ್ಲೈ) ಆಕ್ಟ್, 1948 ಉಪ ನಿಯಮ 79 (ಜೆ) ಇದರಲ್ಲಿ ದತ್ತವಾದ ಅಧಿಕಾರದ ಅಡಿಯಲ್ಲಿ ವಿದ್ಯುತ್ ಸರಬರಾಜು ನಿಯಮಗಳನ್ನು ಮಂಡಳಿಯು ರೂಪಿಸಿದೆ. ಇಂತಹ ವಿ.ಸ.ನಿಯಮ 9.00 ಪ್ರಕಾರ ವಾಣಿಜ್ಯ ಸಂಕೀರ್ಣಗಳಫ್ಲೋರ್ ಏರಿಯಾ ಮೇಲೆ ವಿದ್ಯುತ್ ಬೇಡಿಕೆಯನ್ನು ನಿಗದಿಪಡಿಸಲಾಗುತ್ತಿದೆ.

ಋ) ಹಳೆ ಕಟ್ಟಡಗಳಿಗೆ ಕೆಲವು ಕಡೆ ಸರಬರಾಜು ನಿಯಮಾವಳಿ -9ರ ಪ್ರಕಾರ ವಿದ್ಯುತ್ ಸಂಪರ್ಕ ನೀಡಿದೆ. ತದನಂತರ ಕಂದಾಯ ಪರೀಕ್ಷಣಾ (Revenue Monitioring Cell) ವಿಭಾಗ ಸ್ಥಳ ಪರಿವೀಕ್ಷಣೆಗೆ ಹೋದ ಸಂದರ್ಭದಲ್ಲಿ ಗಮನಕ್ಕೆ ಬಂದಲ್ಲಿ ಮಂಡಳಿಗೆ ಬರಬೇಕಾದ ಹಣವನ್ನು (Augmentation charges) ನಿಗಧಿಪಡಿಸಿ, ಬಿಲ್ಲನ್ನು ಜಾರಿ ಮಾಡಲಾಗುತ್ತದೆ. ಗ್ರಾಹಕರಿಗೆ ಹಣ ಪಾವತಿ ಮಾಡಲು 5 ಕಂತುಗಳ ಸೌಲಭ್ಯವನ್ನು ನೀಡಲಾಗುತ್ತದೆ.

ಋೂ) ಕ.ವಿ.ಪ್ರ.ನಿ.ನಿ.ದಲ್ಲಿ ಆರ್.ಸಿ.ಸಿ ಮತ್ತು ಪಿ.ಸಿ.ಸಿ ಕಂಬಗಳ ಕೊರತೆ ಇಲ್ಲ. ಕೆಲವು ಸಲ ಕಂಬ ತಯಾರಿಕಾ ಸಂಸ್ಥೆಗಳು ಸಕಾಲದಲ್ಲಿ ಕಂಬಗಳನ್ನು ಸರಬರಾಜುಮಾಡದೆ ಇದ್ದುದರಿಂದ ಕೆಲವು ಸಮಯದಲ್ಲಿ ಕಡಿಮೆಯಿರಲು ಕಾರಣವಾಗಿರುತ್ತದೆ.

ಪಿರಿಯಾ ಪಟ್ಟಣದ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಕಛೇರಿಯು ಪ್ರತ್ಯೇಕವಾಗಿಲ್ಲದಿರುವುದರ ಬಗ್ಗೆ

2670 (3431) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾ ಪಟ್ಟಣ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣದಲ್ಲಿ ಪೋಲೀಸ್ ಸರ್ಕ್ಯಲ್ ಇನ್ಸ್‌ಪೆಕ್ಟರವರಿಗೆ ಕಛೇರಿ ಪ್ರತ್ಯೇಕವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಲಿ ಉಪ ನಿರೀಕ್ಷಕರು (Sub-Inspector) ರವರ ಕಛೇರಿ ಬಹಳ ಚಿಕ್ಕದಾಗಿದ್ದು ಎರಡು ಕಛೇರಿಗಳು ನಡೆಸಲು ಸಾಧ್ಯವಾಗುತ್ತಿಲ್ಲವಾದದ್ದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

ಇ) ಈ ಸಮಸ್ಯೆಯನ್ನು ಬಗೆ ಹರಿಸಲು ವೃತ್ತಿ ನೀರಿಕ್ಷಕರಿಗೆ ಪ್ರತ್ಯೇಕ ಕಛೇರಿ ಒದಗಿಸಲು ಸರ್ಕಾರವು ಕ್ರಮ ತೆಗೆದು ಕೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಹೌದು

ಆ) ಹೌದು

ಇ) ಪೋಲೀಸ್ ಇಲಾಖೆಗೆ ಸೇರಿದ ವಸತಿಯೇತರ ಕಟ್ಟಡಗಳನ್ನು ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆದು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.